◆ **ಶಹರಗಳಲ್ಲಿ ಸಹಜವಾಗಿರುವ ಈ ಬಹುಭಾಷಿಕ ಪರಿಸರ, ಭಾಷಾ ದುರಭಿಮಾನ ಸೇರಿಕೊಂಡು, ಭಗ್ನವಾಗಿದೆ.**

ಭಗ್ನ ಬಹಳ ಆಗಿದೇರೀ. ನೋಡಿ, ನಾನು ಉರ್ದು ಮತ್ತು ಮರಾಠಿ ಸೆನ್ಸಿಬಿಲಿಟಿಗೆ ಬಹಳ ಹತ್ತಿರ ಇದೀನಿ. ಹೈದರಾಬಾದ್ ಕರ್ನಾಟಕದ ಉರ್ದುಗನ್ನಡ ನನಗ ಬಹಳ ಪ್ರಿಯ ಅನಸ್ತದ. ಅಲ್ಲಿ ಮರಾಠಿ ಶಬ್ದ ಉಪಯೋಗಿಸಂಗಿಲ್ಲ. ಬೆಳಗಾವಿಯೊಳಗ ಮರಾಠಿಗನ್ನಡ ಉಪಯೋಗಿಸ್ತೀನಿ. ಆದರೆ ಇಲ್ಲಿ ಮರಾಠಿ ಲೇಖಕರು ಕನ್ನಡ ಮಾತಾಡಿಕೊಳ್ಳೋದಿಲ್ಲ, ಕನ್ನಡ ಲೇಖಕರು ಮರಾಠಿ ಮಾತಾಡಿಕೊಳ್ಳೋದಿಲ್ಲ. ಎರಡೂ ಕಡೆ ಹಟವಾದಿತನ ಅದ. ಇನ್ನ ಉರ್ದು ಲೇಖಕರಿಗೆ ಎಗ್ಸಿಸ್ಟೆನ್ಸ್‌ನೇ ಇಲ್ಲ. ಎಲ್ಲೋ ಶಾಯರಿ ಬರಕೊಂತ ಇರ್ತಾರ. ಅವರಿಗೆ ಪಬ್ಲಿಕೇಶನ್ ಅನುಕೂಲನೂ ಇಲ್ಲ. ಭಾಷೆಗಳೊಳಗ ಅನುಸಂಧಾನ ಮಾಡಲಾರದಷ್ಟು ನಾವು ಮಡಿವಂತಿಕೆ ಮಾಡ್ತಾ ಇದೀವಿ. ಇದರಿಂದ ಐಸೋಲೆಟ್ ಆಗಲಿಕತ್ತೀವಿ. ಈ ಐಸೋಲೇಶನ್ ನಮ್ಮ ದುರಂತಕ್ಕೆ ಕಾರಣ. ನನ್ನ ಭಾಷೆ ಸತ್ತು ಅಂತಂದರೆ ನಾನು ಸತ್ತೆ. ಅದಕ ಬೇರೆ ಭಾಷೆಯವನ ಜೊತೆಗಿದ್ದೇ ಮಾತಾಡಿಕೊಂಡು ನಾನು ಬದುಕಬೇಕು. ಅವನು ನನ್ನ ಜತೆಗಿದ್ದು ಬದುಕಬೇಕು. ಅಂಥ ಸಂಸ್ಕೃತಿ ನಮ್ಮಲ್ಲಿ ಬೇಕು.

◆ **ಈ ಕೊಡುಕೊಳುವಿಕೆ ಹೇಗೆ ನಡೆಯಬೇಕು ಅಂತ?**

ಕೊಡುಕೊಳು ಬ್ಯಾಡ. ನಿನ್ನ ಮನ್ಯಾಗ ನೀನು, ನಿನ್ನ ಹೆಂಡ್ತಿ–ಮಕ್ಕಳ ಜೊತೆಗೆ ಪ್ಯೂರ್ ಕನ್ನಡ ಮಾತಾಡು. ಪ್ಯೂರ್ ಮರಾಠಿ ಮಾತಾಡು. ಆದರ ಒಬ್ಬ ಮನುಷ್ಯ ಯಾವನೊ ಬಂದಾನ, ಅವನ ಜೊತೆ ಅವನಿಗೆ ತಿಳಿಯುವಂತಹ ಒಂದು ಭಾಷೆ ನಿನಗ ಗೊತ್ತಿದ್ದರ ಯಾಕ ಮಾತಾಡಂಗಿಲ್ಲ? ಅರ್ಧಮರ್ದ ಮಾತಾಡು, ತಪ್ಪ ಮಾತಾಡು. ಪರವಾಗಿಲ್ಲ. ಅವನಿಗೆ ಗೊತ್ತಾಗಬೇಕು. ಕಮ್ಯುನಿಕೇಶನ್ ಮುಖ್ಯ. ಇಬ್ಬರ ಹ್ಯೂಮನ್ ರಿಲೇಶನ್ ಡೆವಲಪ್ ಆಗಲಿಕ್ಕೆ ಈ ಬಹುಭಾಷೆಗಳು ಏನವ, ಅವು ಕಾಂಟ್ರಿಬ್ಯೂಟ್ ಮಾಡತವ. ಅದರ ಹೆಲ್ಪ್ ತಗೋಳಲಾರದೇ ನಾನು ಕನ್ನಡಾನೇ ಮಾತಾಡ್ತೀನಿ, ಇಂಗ್ಲಿಷನೇ ಮಾತಾಡ್ತೀನಿ, ಮರಾಠಿನೇ ಮಾತಾಡ್ತೀನಿ ಅಂತಂದರ ಮಾತಾಡಿಕೋ. ಬ್ಯಾಡ ಅನಂಗಿಲ್ಲ. ಆದರ ನೀ ಎಲ್ಲಿದ್ದೆಯೊ ಅಲ್ಲೇ ಇರತಿ. ಕುಬ್ಜನಾಗತಿ.

◆ **ನಾಲ್ಕು ಭಾಷೆಗಳಲ್ಲಿ ಬರೆಯುವ ಲೇಖಕರಲ್ಲಿ ನೀವೂ ಒಬ್ಬರು. ಯಾವ ಭಾಷೆ ಹೆಚ್ಚು ಆಪ್ತ ಅನಿಸ್ತದೆ?**

ಅಫ್‌ಕೋರ್ಸ್ ಕನ್ನಡಾನೇ. ಆದರ ನನಗ ಮಾತೃಭಾಷೆ ಇದ್ದಿದ್ದಕ್ಕಾಗಿ ಅದರಲ್ಲಿ ಬಂದಂಥ ಆತ್ಮವಿಶ್ವಾಸದಿಂದ ಹೇಳ್ತಿದೀನಿ. ಇದು ಒಂಥರಾ ಅಹಂಕಾರದ ಮಾತು ಆಗಬಹುದು, ಆದರೂ ಹೇಳ್ತೀನಿ. ನಾನು ಉರ್ದು ಬಂತಂದರೆ, ಇಂಗ್ಲಿಷ್ ಬಂತಂದರೆ ಓದ್ತೀನಿ. ಮರಾಠಿ ಬಂದರೂ ಕನ್ನಡ ಬಂದರೂ ಓದ್ತೀನಿ. ಮರಾಠಿಯ ದೊಡ್ಡ ಚಿಂತಕ ಬಂದಾನ ಅಂದರೂ ಅವನಷ್ಟೇ ಸಮರ್ಥವಾಗಿ ಮಾತಾಡ್ತೀನಿ. ಮರಾಠಿಯೊಳಗ ನೇರವಾಗಿ ಕಥೆ ಬರಿದೀನಿ ದೀಪಾವಳಿ ಅಂಕದೊಳಗ. ಹಿಂದಿಯಲ್ಲಿ ಬರಿದಿದೀನಿ ಬೇಕಾದಷ್ಟು. ನಾಲ್ಕು ಭಾಷೇಲಿ ಮಾತಾಡ್ತೀನಿ ಸ್ಟೇಜ್ ಮೇಲೆ. ಇನ್ನೊವೇಶನ್ ಮೇಲೆ ಯಾವ ಭಾಷೆ ಬೇಕು ಅದನ್ನ ತಗೋತೀನಿ. ಭಾಷೆ ಶಕ್ತೀನೂ ಕೊಡತದ. ಖುಷೀನೂ ಕೊಡತದ

◆ **ಮರಾಠಿ – ಕನ್ನಡ ಜಗಳ ಜನರ ಬದುಕಿನ ಮೇಲೆ ಯಾವ ತರಹ ಪ್ರಭಾವ ಬೀರುತ್ತಿದೆ?**

ಈ ಜಗಳ ಏನದ, ಅದು ಸಾಮಾನ್ಯ ಜನರಲ್ಲಿ ಇಲ್ಲಾರೀ. ಬೆಳಗಾವಿಯಲ್ಲಿ ಏನದ ಗೊತ್ತಾ? ಒಂದು ಫ್ಯಾಮಿಲಿಯೊಳಗ ಹೆಂಡತಿ ಆದರೂ ಗಂಡ ಆದರೂ ಇಬ್ಬರಲ್ಲಿ ಒಬ್ಬ ಕನ್ನಡ ಒಬ್ಬ ಮರಾಠಿ ಇರ್ತಾರ.